ಊರುಗಳನ್ನು ಮಂಡಲ್ ಪಂಚಾಯತ್‌ಗಳನ್ನಾಗಿ ಮಾಡಬೇಕೆಂದು ನಾವು ತೀರ್ಮಾನ ತೆಗೆದು ಕೊಂಡಿದ್ದೇವೆ. ಉಳಿದ ೧೭೧ ಮುನಿಸಿಪಾಲಿಟಿಗಳಲ್ಲಿ ೪೭ ಮುನಿಸಿಪಾಲಿಟಿಗಳಿಗೆ ಆಲ್ಲಿರತಕ್ಕಂಥ ನೌಕರರಿಗೆ ಸಂಬಳ ಕೊಡುವುದಕ್ಕೆ ಆದಾಯ ಇಲ್ಲದೇ ಇರತಕ್ಕಂಥಾದ್ದು ಇದೆ ಅವುಗಳಲ್ಲಿ ಸುಮಾರು ೨೦ ಮುನಿಸಿಪಾಲಿಟಿಗಳಲ್ಲಿ ೨೦ ಸಾವಿರಕ್ಕಿಂತಲೂ ಕಡಿಮೆ ಜನಸಂಖ್ಯೆ ಇದೆ ಈ ಒಂದು ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಸಂಗಪ್ಪ ಸಿದ್ದಪ್ಪ ಕಡಪಟ್ಟಿಯವರು ಈ ಬಗ್ಗೆ ಏನು ತೂಕವಾದ ಪ್ರಶ್ನೆ ಹಾಕಿದ್ದಾರೆ ಅದು ಸರಿ ಎಂದು ನನಗೆ ಅನಿಸುತ್ತದೆ. ಇಷ್ಟು ಮಾತ್ರ ನಾನು ಹೇಳಬಲ್ಲೆ.

ಶ್ರೀ ಎಸ್.ಎಸ್. ಕಡಪಟ್ಟಿ —ನಾನು ತೂಕದ ಪ್ರಶ್ನೆ ಹಾಕಿದ್ದೇನೆ ಹಾಗೂ ಇದನ್ನು ಪರಿಶೀಲನೆ ಮಾಡುತ್ತೇನೆ ಎಂದು ಬಹಳ ಬುದ್ಧಿವಂತರಾದ ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳುವುದಕ್ಕೆ ಬದಲು ಇದನ್ನು ಇನ್ನು ೩ ತಿಂಗಳು ಇಲ್ಲವೇ ೬ ತಿಂಗಳು ಇಲ್ಲವೇ ಒಂದು ವರ್ಷದಲ್ಲಿ ಕಾರ್ಯಗತ ಮಾಡಲು ಪ್ರಯತ್ನ ಮಾಡುತ್ತೇನೆಂದು ಏತಕ್ಕೆ ಹೇಳಬಾರದು? ಈಗ ಯಾವ ಯಾವ ಮುನಿಸಿಪಾಲಿಟಿಗಳ ಜನ ಸಂಖ್ಯೆ ೧೫ ಸಾವಿರ ಇಲ್ಲವೇ ೨೦ ಸಾವಿರಕ್ಕಿಂತ ಕಡಿಮೆ ಇದೆಯೋ ಮತ್ತು ಯಾವ ಯಾವ ಮುನಿಸಿಪಾಲಿಟಿಗಳಿಗೆ ವರಮಾನ ಕಡಿಮೆ ಇದೆಯೋ ಹಾಗೂ ಯಾವ ಯಾವ ಮುನಿಸಿಪಾಲಿಟಿಗಳಿಗೆ ತಮ್ಮ ಸಂಪನ್ಮೂಲಗಳನ್ನು ಹುಬ್ಬಳ್ಳಿ-ಧಾರವಾಡ ನಗರಸಭೆಯವರು ಹಾಕಿರುವಷ್ಟು ತೆರಿಗೆಯನ್ನು ಹಾಕಿದರೂ ಸಹ ಜಾಸ್ತಿ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲವೋ ಮತ್ತು ಯಾವ ಯಾವ ಮುನಿಸಿಪಾಲಿಟಿಗಳಿಗೆ ತನ್ನ ನೌಕರರಿಗೆ ಸಂಬಳ ಕೊಡುವಷ್ಟು ಯೋಗ್ಯತೆ ಇಲ್ಲವೋ ಅಂತಹ ಮುನಿಸಿಪಾಲಿಟಿಗಳ ಬಗ್ಗೆ ತೀವ್ರವಾದಂಥ ಕ್ರಮವನ್ನು ಕೈಕೊಂಡು, ಅವುಗಳನ್ನೆಲ್ಲಾ ಇಷ್ಟು ತಿಂಗಳಲ್ಲಿ ಮಂಡಲ್ ಪಂಚಾಯಿತಿಗಳನ್ನಾಗಿ ಪರಿವರ್ತಿಸಲಾಗುವುದೆಂದು ತಾವು ಹೇಳಬೇಕು. ಈ ಬಗ್ಗೆ ತಮ್ಮ ನಿರ್ಧಾರವನ್ನು ಈ ರಾಜ್ಯದ ಜನತೆಗೆ ಈ ಸದನದ ಮೂಲಕ ಬಹಿರಂಗಪಡಿಸುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್ —ತಮ್ಮ ಸಲಹೆ ತುಂಬಾ ಚೆನ್ನಾಗಿದೆ. ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡುತ್ತೇವೆ ಎನ್ನುವ ಮಾತನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಇದಕ್ಕೆ ಸಮಯವನ್ನು ಗೊತ್ತು ಮಾಡುವುದಕ್ಕಾಗುವುದಿಲ್ಲ.

ಕರ್ನಾಟಕ ಗೃಹ ಮಂಡಳಿಯವರು ರೇಷ್ಮೆ ಬೆಳೆಗಾರರಿಗೆ ನೀಡಿರುವ ಸೌಲಭ್ಯ

೧೦೨೯. ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕರ್ನಾಟಕ ಗೃಹ ಮಂಡಳಿ ಯೋಜನೆಯಲ್ಲಿ ಎಷ್ಟು ರೇಷ್ಮೆ ಬೆಳೆಗಾರ ಕುಟುಂಬ ಗಳಿಂದ ಮನೆ ಕಟ್ಟಲು ಆರ್ಥಿಕ ನೆರವಿಗಾಗಿ ಅರ್ಜಿಗಳು ಬಂದಿವೆ. (೧೯೮೫-೮೬ ೧೯೮೬-೮೭ ವರ್ಷವಾರು ಮತ್ತು ಜಿಲ್ಲಾವಾರು ವಿವರ ಒದಗಿಸುವುದು)

ಆ) ರಾಜ್ಯದಲ್ಲಿ ಈ ಯೋಜನೆಯಲ್ಲಿ ಎಷ್ಟು ರೇಷ್ಮೆ ಬೆಳೆಗಾರ ಕುಟುಂಬಗಳಿಗೆ ಮನೆ ಕಟ್ಟಲು ಆರ್ಥಿಕ ನೆರವಿಗಾಗಿ ಅರ್ಜಿ ನೀಡಲಾಗಿದೆ. (೧೯೮೫-೮೬, ೮೬-೮೭ ವರ್ಷವಾರು ವಿವರ ಒದಗಿಸುವುದು)

ಇ) ಆ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ರೇಷ್ಮೆ ಬೆಳೆಗಾರ ಕುಟುಂಬಗಳಿಂದ ಮನೆ ಕಟ್ಟಲು ಆರ್ಥಿಕ ನೆರವಿಗಾಗಿ ಅರ್ಜಿಗಳು ಬಂದಿವೆ. ಹಾಗೂ ಮಂಜೂರಾಗಿವೆ ೧೯೮೫-೮೬,

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಕರ್ನಾಟಕ ಗೃಹ ಮಂಡಳಿಯಿಂದ ರೇಷ್ಮೆ ಬೆಳೆಗಾರ ಕುಟುಂಬಗಳಿಗೆ ಮನೆ ಕಟ್ಟಲು ಆರ್ಥಿಕ ನೆರವು ನೀಡುವ ಯೋಜನೆ ಇರುವುದಿಲ್ಲ. ಕರ್ನಾಟಕ ಗೃಹ ಮಂಡಳಿಯು ರೇಷ್ಮೆ ಇಲಾಖೆ ಮತ್ತು ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದು ರೇಷ್ಮೆ ಬೆಳೆಗಾರರ ಕುಟುಂಬಗಳಿಗೆ ಮನೆ ಕಟ್ಟುವ ಯೋಜನೆಯನ್ನು ಕೈಗೊಂಡಿದೆ.

ಅ) ಕರ್ನಾಟಕ ಗೃಹ ಮಂಡಳಿಯಿಂದ ಆರ್ಥಿಕ ನೆರವು ನೀಡುವ ಯೋಜನೆ ಇಲ್ಲವಾದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಯೋಜನೆ ಜಾರಿಯಲ್ಲಿ ಇರುವುದಿಲ್ಲ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ಇಲ್ಲಿ ನನ್ನ ಮೊದಲನೆ ಪ್ರಶ್ನೆಗೆ ಉತ್ತರವಾಗಿ ಕರ್ನಾಟಕ ಗೃಹ ಮಂಡಳಿಯು ರೇಷ್ಮೆ ಇಲಾಖೆ ಮತ್ತು ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದು ರೇಷ್ಮೆ ಬೆಳೆಗಾರರ ಕುಟುಂಬಗಳಿಗೆ ಮನೆ ಕಟ್ಟುವ ಯೋಜನೆಯನ್ನು ಕೈಗೊಂಡಿದೆ ಎಂದು ಹೇಳಿದ್ದೀರಿ. ಹಾಗಿದ್ದರೆ ಇದಕ್ಕೆ ಎಷ್ಟು ಹಣವನ್ನು ತೆಗೆದಿಟ್ಟಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರಿ ಅಬ್ದುಲ್ ನಜೀರ್ ಸಾಬ್. ಈಗ ಕಂಡಿಗಲ್ ತಾಲ್ಲೂಕಿನಲ್ಲಿ ಮಾತ್ರ ಈ ಕರ್ನಾಟಕ ಗೃಹ ಮಂಡಳಿಯಿಂದ ೧೯೭ ಮನೆಗಳನ್ನು ರೇಷ್ಮೆ ಬೆಳೆಗಾರರ ಕುಟುಂಬದವರಿಗೆಂದು ಕಟ್ಟಿಸಲಾಗಿದೆ. ಈ ಬಾಬಿಗೆ ರೇಷ್ಮೆ ಇಲಾಖೆಯವರು ಸ್ವಲ್ಪ ಹಣ ಕೊಡುತ್ತಾರೆ. ಈ ಹಣದ ಜೊತೆಗೆ ಹೌಸಿಂಗ್ ಬೋರ್ಡಿನವರು ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದು ಮನೆಗಳನ್ನು ಕಟ್ಟುತ್ತಾರೆಯೇ ಹೊರತು ಇದಕ್ಕಾಗಿಯೇ ಹೌಸಿಂಗ್ ಬೋರ್ಡಿನಲ್ಲಿ ಹಣವನ್ನು ತೆಗೆದಿಟ್ಟಿಲ್ಲ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ನಾನು ಈ ಬಗ್ಗೆ ಪ್ರಶ್ನೆ ಕೇಳಿದ ಉದ್ದೇಶವೇನೆಂದರೆ ಕರ್ನಾಟಕ ವಾರ್ತಾ ಮತ್ತು ಪ್ರಚಾರ ಇಲಾಖೆಯವರು ಹೊರಡಿಸಿದಂಥ ಒಂದು ಪುಸ್ತಕದಲ್ಲಿ ರೇಷ್ಮೆ ಬೆಳೆಗಾರರಿಗೆ ಹುಡ್ಕೊ ಸಂಸ್ಥೆಯಿಂದ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆ ಇದೆ ಎಂದು ಪ್ರಚಾರ ಮಾಡಿದ್ದರು. ಆದ್ದರಿಂದ ಆ ಪುಸ್ತಕದಲ್ಲಿರಬಹುದಾದಂಥ ಕಾರ್ಯಕ್ರಮಗಳು ಅನುಷ್ಠಾನದಲ್ಲಿ ಬರುತ್ತವೆಯೋ ಅಥವಾ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವ ಕುತೂಹಲದಿಂದ ನಾನು ಈ ಪ್ರಶ್ನೆ ಕೇಳಿದ್ದು.

ಶ್ರೀ ಅಬ್ದುಲ್ ನಜೀರ್ ಸಾಬ್.— ನಾನು ಮೊದಲೇ ಹೇಳಿದಂತೆ ಇದಕ್ಕೆ ಒಂದು ಯೋಜನೆ ಇದೆ. ಈ ಕೆಲಸಕ್ಕೊಂದು ರೇಷ್ಮೆ ಇಲಾಖೆಯವರು ಹೌಸಿಂಗ್ ಬೋರ್ಡಿಗೆ ಸ್ವಲ್ಪ ಹಣ ಕೊಡುತ್ತಾರೆ. ನಂತರ ಹೌಸಿಂಗ್ ಬೋರ್ಡಿನವರು ಹುಡ್ಕೊ ಸಂಸ್ಥೆಯಿಂದ ಸಾಲ ಪಡೆದು ಮನೆಗಳನ್ನು ಕಟ್ಟುತ್ತಾರೆ. ಇಲ್ಲಿ ಹೌಸಿಂಗ್ ಬೋರ್ಡು ಒಂದು ಏಜೆನ್ಸಿಯಾಗಿ ಕೆಲಸ ಮಾಡುತ್ತದೆಯೇ ಹೊರತು ಹೌಸಿಂಗ್ ಬೋರ್ಡಿಲ್ಲಿ ಇದಕ್ಕಾಗಿಯೇ ಪ್ರತ್ಯೇಕವಾಗಿ ಹಣವನ್ನು ಇಟ್ಟಿಲ್ಲ.

ಕರ್ನಾಟಕ ಭೂ ಸೇನಾ ನಿಗಮ.

೧೩೫೩. ಶ್ರೀ ಜಿ. ರಾಜಗೌಡ (ಹನೂರು) —ವಾಣಿಜ್ಯ ಉದ್ಯಮಗಳಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಭೂ ಸೇನಾ ನಿಗಮ ಯಾವಾಗ ಈ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿದೆ ? ಇದರ ಮೂಲ ಬಂಡವಾಳವನ್ನು ಹೇಗೆ ಪಡೆದಿರುತ್ತೆ ?

ಆ) ಈಗ ಇದು ಹೊಂದಿರುವ ಚರ ಹಾಗೂ ಸ್ಥಿರ ಆಸ್ತಿಯ ಮೌಲ್ಯವೇನು ?

ಇ) ಇದುವರೆಗೆ ಎಷ್ಟು ಪೊತ್ತದ ಕಾಮಗಾರಿಗಳನ್ನು ಮಾಡಿದೆ ?

ಈ) ಈಗ ನಿಗಮದ ಬಂಡವಾಳ ಎಷ್ಟಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್(ವಾಣಿಜ್ಯೋದ್ಯಮಗಳಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು).—

ಅ) ಕರ್ನಾಟಕ ಭೂ ಸೇನಾ ನಿಗಮವು ಅಸ್ತಿತ್ವಕ್ಕೆ ಬಂದ ದಿನಾಂಕ ೯-೮-೧೯೭೪. ಮೂಲ ಬಂಡವಾಳ ೨೫.೦೦ ಲಕ್ಷ ರೂಪಾಯಿಗಳನ್ನು ಕರ್ನಾಟಕ ಸರಕಾರದಿಂದ ಪಡೆದಿರುತ್ತೆ. (ರೂ. ೧೨.೯೬ ಲಕ್ಷ ರೂಪಾಯಿ ಮಾಫಿನ ರೂಪದಲ್ಲಿ ಮತ್ತು ೧೨.೦೪ ಲಕ್ಷ ರೂ. ಋಣದ ರೂಪದಲ್ಲಿ ಪಡೆದಿರುತ್ತೆ).